

# ಪ್ರಕೃತಿಸ್ನೇಹಿ ಕಲಾಕೃತಿ







ಮಾಸ್ಕೋದಿಂದ ಸುಮಾರು 200 ಕಿಲೋಮೀಟರ್ ದೂರದಲ್ಲಿ ನಿಕೊಲಾ ಲೆನಿವೆಂಟ್ ಹೆಸರಿನ ಪುಟ್ಟ ಹಳ್ಳಿಯೊಂದಿದೆ. ಉಗ್ರಾ ನದೀ ತಟದಲ್ಲಿರುವ ಈ ಹಳ್ಳಿಯಲ್ಲಿ ವರ್ಷಕ್ಕೊಮ್ಮೆ ಮೇಳವೊಂದು ಜರಗುತ್ತದೆ. ಇದು ಅಂತಿಂಥ ಮೇಳವಲ್ಲ. ಭೂ ಕಲೆ(ಲ್ಯಾಂಡ್ ಆರ್ಟ್) ವಾಸ್ತುಶಿಲ್ಪ, ಕಲಾಕೃತಿಗಳ ಪ್ರತಿಷ್ಠಾಪನೆಗಳನ್ನೆಲ್ಲಾ ಮೇಳೈಸಿಕೊಂಡಿರುವ ಬೃಹತ್ ಕಲಾಮೇಳ.

ರಷ್ಯಾ ದೇಶದಲ್ಲೇ ಅತೀ ದೊಡ್ಡದೆನಿಸಿಕೊಂಡಿರುವ ಆರ್ಕೆಸ್ಟೋಯಾನಿ ಲ್ಯಾಂಡ್ ಆರ್ಟ್ ಎಂಬ ಹೆಸರಿನ ಈ ಕಲಾ ಉತ್ಸವಕ್ಕೆ ವಿಶ್ವದ ವಿವಿಧೆಡೆಯಿಂದ ಸಾವಿರಾರು ಕಲಾಸಕ್ತರು ಭೇಟಿ ನೀಡುತ್ತಾರೆ. ಈ ಮೇಳದ ಪರಿಕಲ್ಪನೆಯು ಮೊಟ್ಟಮೊದಲು ಮೂಡಿದ್ದು ನಿಕೊಲೈ ಪೋಲಿಸ್ಕಿ ಎಂಬ ಕಲಾವಿದನಿಂದ. ಈತ ನಗರ ಜೀವನದ ಜನಸಾಂದ್ರತೆ ಹಾಗೂ ಅಲ್ಲಿನ ಉಸಿರು ಕಟ್ಟುವ ವಾತಾವರಣಕ್ಕೆ ಬೇಸತ್ತು 1989 ರಲ್ಲಿ ನಿಕೊಲಾ ಲೆನಿವೆಂಟ್ ಹಳ್ಳಿಗೆ ವಲಸೆ ಬಂದನಂತೆ.

ತನ್ನ ಸ್ಟುಡಿಯೋದಲ್ಲಿ ಸ್ಥಳೀಯರನ್ನೇ ಕೆಲಸಕ್ಕೆ ನಿಯೋಜಿಸಿಕೊಂಡು, ಹುಲ್ಲು, ರೆಂಬೆ ಕೊಂಬೆ ಮೊದಲಾದ ಪ್ರಕೃತಿದತ್ತ ವಸ್ತುಗಳನ್ನೇ ಬಳಸಿಕೊಂಡು ದೊಡ್ಡ ದೊಡ್ಡ ಗಾತ್ರದ ಪ್ರಕೃತಿಸ್ನೇಹಿ ಕಲಾಕೃತಿಗಳನ್ನು ನಿರ್ಮಿಸಲಾರಂಭಿಸಿದನಂತೆ.

ನಿಕೊಲಾ ಲೆನಿವೆಂಟ್ ಹಳ್ಳಿಯಲ್ಲಿ 2006ರಲ್ಲಿ ಮೊದಲ ಆರ್ಕೆಸ್ಟೋಯಾನಿ ಕಲಾಮೇಳವು ಪೋಲಿಸ್ಕಿಯ ನೇತೃತ್ವದಲ್ಲಿ ನಡೆಯಿತು. ಈಗ ಈ ಉತ್ಸವವು ಪ್ರತೀ ವರ್ಷವೂ ನಡೆಯುತ್ತಿದ್ದು, ಜರ್ಮನಿ, ಫ್ರಾನ್ಸ್ ಮತ್ತು ಜಪಾನ್ ಮೊದಲಾದ ದೂರ ದೇಶದಿಂದಲೂ ಹೊಸ ಕಲಾವಿದರನ್ನು, ವಾಸ್ತುಶಿಲ್ಪಿಗಳನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ ಮತ್ತು ತಾತ್ಕಾಲಿಕ ಹಾಗೂ ಬಹು ಕಾಲದವರೆಗೂ ಉಳಿಯುವ ಕಲಾಕೃತಿಗಳನ್ನು ನಿಕೊಲಾ ಲೆನಿವೆಂಟ್ ಪಾರ್ಕ್‌ನಲ್ಲಿ ಪ್ರತಿಷ್ಠಾಪಿಸಿ ತಮ್ಮ ನೈಪುಣ್ಯವನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸುತ್ತಿದೆ.

■ ವಿದ್ಯಾ ವಿ. ಹಾಲಭಾವಿ